

# ಬಂಗಾರದಂಥ ಸಿಂಗಾರ

■ ಚಿತ್ರ– ಬರಹ:
**ಶಶಾಂಕ್ ಬಜೆ**

ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಅಡಿಕೆ ಮರದ ಸಿಂಗಾರ ಎಲ್ಲಾ ರೀತಿಯ ಧಾರ್ಮಿಕ ಕಾರ್ಯಕ್ರಮಗಳ ಅವಿಭಾಜ್ಯ ಅಂಗ. ಅಡಿಕೆ, ವೀಳ್ಯದೆಲೆ ಹಾಗೂ ಸಿಂಗಾರ ಈ ಮೂರು ವಸ್ತುಗಳು ಶುಭ ಸಂದರ್ಭಗಳಲ್ಲಿ ಪ್ರಾಮುಖ್ಯತೆ ಪಡೆದಿವೆ. ತುಳುನಾಡಿನಲ್ಲಿ ಪ್ರಾಚೀನ ಕಾಲದಿಂದಲೂ ಚಾಲ್ತಿಯಲ್ಲಿರುವ ನಾಗಮಂಡಲದ ಸಮಯದಲ್ಲಂತೂ ಸಿಂಗಾರ ಅತ್ಯಗತ್ಯ. ನಾಗದೇವನಿಗೆ ಪ್ರಿಯವಾದ ಹೂಗಳಲ್ಲಿ ಸಿಂಗಾರವೂ ಒಂದು ಎನ್ನಲಾಗುತ್ತದೆ.

ಅಡಿಕೆ ಮರದ ಹೂವಿಗೆ ಸಿಂಗಾರವೆಂದು ಹೆಸರು. ಅರಳಿದಾಗ ಮರ ಸಿಂಗರಿಸಿಕೊಂಡಂತೆ ಕಾಣುವುದರಿಂದ ಆ ಹೆಸರು ಬಂದಿರಬಹುದು. ಆಕರ್ಷಣೆಯಷ್ಟೇ ಅಲ್ಲ, ಸೌಂದರ್ಯದಂತೆ ಸುವಾಸನೆಯೂ ಸಿಂಗಾರಕ್ಕಿದೆ. ಆದ್ದರಿಂದಲೇ ನಾಗರಹಾವುಗಳು ಇವುಗಳತ್ತ ಆಕರ್ಷಿತನಾಗುತ್ತಾನೆ ಎಂದಿರಬಹುದು. ಜೇನು ಸಾಕಣೆ ನಡೆಸುವ ಅನುಭವಸ್ಥರಲ್ಲಿ ಕೇಳಿದರೆ, ಅಡಿಕೆ ಸಿಂಗಾರದಿಂದ ಹೆಚ್ಚು ಸಂಗ್ರಹವಾದ ಜೇನು ಹೆಚ್ಚು ಸಿಹಿಯಾಗಿದ್ದು ವಿಶೇಷ ರುಚಿ ಹೊಂದಿರುತ್ತದೆ ಎನ್ನುತ್ತಾರೆ.



ಧಾರ್ಮಿಕ ಕಾರ್ಯದಲ್ಲೇ ಹೆಚ್ಚು ಬಳಕೆಯಾಗುವ ಸಿಂಗಾರದಲ್ಲಿ ಇನ್ನೂ ಬಿರಿಯದ ಸಿಂಗಾರಕ್ಕೇ ಹೆಚ್ಚಿನ ಪ್ರಾಶಸ್ತ್ಯ. ನಾರಿಕೇಳದ ನೀರು ಉತ್ಕೃಷ್ಟ ಎಂದು ಪರಿಗಣಿಸಿದಂತೆ, ಇನ್ನೂ ಹೊರಜಗತ್ತಿನ ಸ್ಪರ್ಶಕ್ಕೆ ಬರದೆ ಇರುವುದರಿಂದಲೇ ಬಿರಿಯದ ಸಿಂಗಾರಕ್ಕೆ ಈ ಪ್ರಾಶಸ್ತ್ಯ. ಪೂಜಾ ವಿಧಿವಿಧಾನಗಳಿಗೆಂದೇ ಎತ್ತರಕ್ಕೆ ಬೆಳೆದ ಮರಕ್ಕೆ ಹತ್ತಿ ಜಾಗರೂಕತೆಯಿಂದ ಸಿಂಗಾರವನ್ನು ಕಿಂಚಿತ್ತೂ ಧಕ್ಕೆ ಬರದಂತೆ ಇಳಿಸಲಾಗುತ್ತದೆ.

ಬಿರಿಯುವ ಹಂತದಲ್ಲಿ ಅಕ್ಕಿಯ ಕಾಳುಗಳಂತೆ ಕಾಣುವ ರಚನೆಯನ್ನು ಸಿಂಗಾರದಲ್ಲಿ ಕಾಣಬಹುದು. ಇವುಗಳ ನಡುವೆಯೇ ಸಣ್ಣದಾಗಿ ಕೇಸರಗಳು ಹೊರಚಾಚಿರುತ್ತವೆ. ದುಂಬಿ, ಇರುವೆ, ಜೇನ್ನೊಣಗಳಂತಹ ಜೀವಿಗಳಿಂದ ಪರಾಗಸ್ಪರ್ಶಗೊಂಡ ನಂತರವೇ ಈ ಕಾಳುಗಳು ಅಡಿಕೆಯಾಗಿ ಬೆಳೆಯುತ್ತವೆ. ಫಲಪ್ರದವಾದ ಪರಾಗಸ್ಪರ್ಶದ ಸಂಖ್ಯೆ ಹೆಚ್ಚಾದಂತೆ ಒಂದು ಸಿಂಗಾರದಲ್ಲಿನ ಬೆಳೆಯುವ ಅಡಿಕೆಗಳ ಸಂಖ್ಯೆ ನಿರ್ಧಾರಿತವಾಗುತ್ತದೆ. ಇನ್ನುಳಿದವು ಉದುರಿಹೋಗುತ್ತವೆ.

ಅಡಿಕೆ ಅರೆಕಾಸಿಯೆಸಿ ಸಸ್ಯಕುಟುಂಬಕ್ಕೆ ಸೇರಿದ್ದು. 5–6 ವರ್ಷಗಳಲ್ಲಿ ಗಿಡ ಬೆಳೆದು ಸಿಂಗಾರ ಬಿಡಲಾರಂಭಿಸುತ್ತದೆ. ದಕ್ಷಿಣ ಆಫ್ರಿಕಾ, ಮಲೇಶ್ಯಾ, ಭಾರತ ಮಾತ್ರವಲ್ಲದೆ, ದಕ್ಷಿಣ ಏಶ್ಯಾದ ಕೆಲವು ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಯಾಗಿ ಅಡಿಕೆ ಪ್ರಸಿದ್ಧ. ನಮ್ಮ ರಾಜ್ಯದಲ್ಲಂತೂ ಅಡಿಕೆ ಇದೀಗ ಬಹುದೊಡ್ಡ ವಾಣಿಜ್ಯ ಬೆಳೆ.